260

1239

ಮೈಸೂರ ಗೆಜಿಟ್.

ಸಂ. 39.] ಸರ್ಕಾರದಿಂದ ಪ್ರಾಯುಷ್ ಆದ್ದು. [ನಂ. 31.

ಬೆಂಗಳೂರು, ಗುರುವಾರ, ಆಗೆಸ್ಟು ತಾ|| 4, ಸ್ ೧೯೦೪.

IIನೆ ಭಾಗ.

ಇಂಡ್ಯಗವರ್ನ್‌ಮೆಂಟ್, ಕಸಿಡೆಂಟರು, ಚೀಫ್ ಜಡ್ಜ್‌ರು ವಗ್ಯೆರೆಯೋರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಇನಾಂ ಇಲಾಖಾ.

ಇಸ್ತಿಹಾರ್ನಾಮೆ.

ನಂ. I. ತಾರೀಖು 29ನೆ ಜುಲೈ 1904.

ಇನಾಂದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ, ನಂಜನಗೂಡು ತಾಲ್ಲೂಕಿನಲ್ಲಿರತಕ್ಕ ಚಿಲ್ಲರೆ ಇನಾಂಗಳ ಬಾಬತು 156 ಫೈನಲ್ ಟೈಟಲ್ ಡೀಡಯಾನೆ ಖಾಯಂ ಪಟ್ಟಿಗಳು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮಿಷನರವರ ಬಳಿಗೆ ಬಟವಾಡೆ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟಿವೆ.

2. ಸದರಿ ತಾಲ್ಲೂಕಿನ ಅಮಲ್‌ದಾರ್ರಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸುಗಳು ಬಂದಮೇಲೆ ಅವುಗಳನ್ನ ತೆಗದುಕೊಳ್ಳುವ ಬಗ್ಯೆ ಸದರಿ ಇನಾಂದಾರರು ಐರ್ಜ್ ಪ್ರಕಾರ ಹಾಜರಾಗತಕ್ಕದ್ದು. ಸದರಿ ತಾಲ್ಲೂಕಿನ ಅಮಲ್‌ದಾರ್ರು ಅಂಥಾ ನೋಟೀಸುಗಳನ್ನು ಬೇರೆ ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟು ಇರುತ್ತಾರೆ.

3. ಸದರಿ ಚಿಲ್ಲರೆ ಇನಾಂಗಳ ಬಗ್ಯೆ ಈ ಆಫೀಸಿನಿಂದ ಮೊದಲಿ ಕೊಡಲ್ಪಟ್ಟ ಹಂಗಾಮಿ ಪಟ್ಟಿಗಳು ರದ್ದು ಮಾಡಲ್ಪಟ್ಟವು ತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಟ್ಟು ಇರುತ್ತ.

ಜೆ. ಪಿ. ಗ್ಯಾಂಟ್,
ಸೂಪರಿಂಟೆಂಡೆಂಟ್ ಆಫ್ ಇನಾಂ ಸೆಟಲಮೆಂಟ್ಸ್.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 20ನೆ ಜುಲೈ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಬೆಂಗಳೂರು ಡಿಸ್ಟ್ರಿಕ್ಟ್ ಕಾನಕಾನಹಳ್ಳಿ ಫಾರೆಸ್ಟ್ ರೇಂಜಿಗೆ ಕೇರಿದ ಬಿಳಿಕಲ್ ಮತ್ತು ಚಿಲಂದಾಡಿ ಸ್ಪೆಷಲ್ ಫಾರೆಸ್ಟ್‌ಗಳಲ್ಲಿ ಇರುವ ಪಪ್ಪಳೀ ಚಕ್ಕೆ 1904–1905ನೆ ಸಾಲು ಬಾಬತು 1905ನೆ ಜೂನ್ ಆಖೈರ್‌ವರಿವಿಗೆ ರೂಢಿಸಿಕೊಳ್ಳುವ ಹಕ್ಕನ್ನು 20—8—1904ನೆ ಮಂಗಳವಾರದಲ್ಲಿ ಕಾನಕಾನಹಳ್ಳಿ ಮೊಕ್ಕಾಂನಲ್ಲಿ ರೇಂಜ್ ಫಾರೆಸ್ಟ್ ಆಫಿಸರವರು ಬಹಿರಂಗವಾಗಿ ಹರಾಜು ಹಾಕುವರು. ಈ ಹರಾಜು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ಮಂಜೂರಾತಿಗೆ ಬಳಪಟ್ಟಿರುತ್ತ.

1. ಚಡದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಒಟ್ಟು ಮೊಬಲಗಿನ ಪೈಕಿ ಕಾಲುಹಿಸ್ಸೆ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಈರೀತಿ ಮಾಡದೆ ತಪ್ಪಿದಲ್ಲಿ ದುಸರಾ ಹರಾಜು ಮಾಡಲ್ಪಡುವದಲ್ಲದೆ ಸರ್ಕಾರಕ್ಕೆ ಉಂಟಾಗುವ ನಷ್ಟಕ್ಕೆ ಪೂರು ದರಖಾಸ್ತುದಾರನನ್ನು ಗುರಿಮಾಡಲ್ಪಡುತ್ತೆ. ಆದರೆ ಫಾಯಿದೆ ವುಂಟಾದಲ್ಲಿ ಈತನು ಭಾಗಿಯಾಗುವದಿಲ್ಲ.

2. ದರಖಾಸ್ತುದಾರನಿಗೆ ದರಖಾಸ್ತು ಮಂಜೂರಾದ ಸಂಗತಿಯನ್ನು ತಿಳಿಸಿದ ಬಂದು ವಾರದೊಳಗಾಗಿ ಬಾಕಿ ಆಗುವ ಎಲ್ಲಾ ಮೊಬಲಗನ್ನೂ ಪಾವತಿ ಮಾಡಬೇಕು. ಹಾಗೆ ಸದರೀ ಹಣವನ್ನು ಪಾವತಿ ಮಾಡದೇ ತಪ್ಪಿದಲ್ಲಿ ಮೊದಲು ಕೊಟ್ಟ ಕಾಲು ಹಿಸ್ಸೆ ಹಣವನ್ನು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳುವದಲ್ಲದೆ ಇನ್ನು ಬಾಕಿ ವುಳಿಯುವ ಹಣವನ್ನು ರೆವಿನ್ಯೂ ಕಂದಾಯದಂತೆ ವಸೂಲ ಮಾಡಲಾಗುತ್ತೆ. ಪೂರಾ ಮೊಬಲಗು ಪಾವತಿ ಆದ ಕೂಡ್ಲೆ ಮಾಲು ರಪ್ತ ಮಾಡಿಕೊಳ್ಳಲು ಲೈಸೆನ್ಸು ಕೊಡುತ್ತೆ.